b) If so, what are the actions taken by the Government against those who sold kerosene oil in black market?

SMT. MANORAMA MADHWARAJ (Minister for Food and Civil Supplies):–

a) The allotment of Kerosene to the State is not adequate. However, it is being sold at reasonable rates.

b) Action is taken against the dealers who indulge in black marketing of kerosene oil. 74 kerosene dealer licences have been cancelled, and the licences of 344 dealers are placed under suspension.

ಶ್ರೀ ಎಂ.ವಿ. ವೆಂಕಟಪ್ಪ:– ನಮ್ಮ ಕರ್ನಾಟಕ ರಾಜ್ಯಕ್ಕೆ ಸೆಂಟರ್‌ನಿಂದ ಎಷ್ಟು ಸೀಮೆಎಣ್ಣೆ ಬರುತ್ತಿದೆ, ಎಷ್ಟು ಸಾಲದೆ ಬಂದಿದೆ, ಎಷ್ಟು ಸೀಮೆಎಣ್ಣೆಯನ್ನು ಕೋಲಾರ ಜಿಲ್ಲೆಗೆ ಕೊಟ್ಟಿದ್ದೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್:– ಕರ್ನಾಟಕ ರಾಜ್ಯದ ಒಟ್ಟು ಬೇಡಿಕೆ ತಿಂಗಳೊಂದಕ್ಕೆ 67 ಸಾವಿರ ಕಿಲೋಲೀಟರ್, ನಮಗೆ 47,513 ಕಿಲೋ ಲೀಟರ್ ಬರುತ್ತಿದೆ. ಅದರಲ್ಲಿ ಕೋಲಾರ ಜಿಲ್ಲೆಗೆ 2150 ಕಿಲೋ ಲೀಟರ್ ಕೊಡುತ್ತಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ:– ಹಿಂದಿನ ಪ್ರಶ್ನೆಗೆ ವಿಜಿಲೆನ್ಸ್ ಕಮಿಟಿ ಮಾಡಿದ್ದೇವೆ ಎಂದು ಹೇಳಿದಿರಿ. ಆ ವಿಜಿಲೆನ್ಸ್ ಕಮಿಟಿಗಳಿಗೆ ಇರುವ ಪವರ್ಸ್ ಏನು ?

ಶ್ರೀಮತಿ ಮನೋರಮಾ ಮಧ್ವರಾಜ್:– ಪವರ್ಸ್ ಏನೂ ಇಲ್ಲ. ಅಳತೆ ತೂಕದಲ್ಲಿ ಹೆಚ್ಚು ಕಡಿಮೆ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು, ಪವರ್ಸ್ ಕೊಡುವುದಕ್ಕೆ ಆಗುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು

54. ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಮತ್ತು ಶಂಕರನಾರಾಯಣ ಊರುಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1) ಬೋಧಕ 2) ಬೋಧಕೇತರ ಸಿಬ್ಬಂದಿಗಳ ಸ್ಥಾನ ಎಷ್ಟು ಖಾಲಿ ಇದೆ ?

ಆ) ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಇ) ಸದರಿ ಕಾಲೇಜುಗಳಿಗೆ ಕಟ್ಟಡ ಕಟ್ಟಲು ಯಾವ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಸಚಿವರು):–

ಅ)	ಖಾಲಿ ಇರುವ ಬೋಧಕ	ಸ್ಥಾನಗಳ ಸಂಖ್ಯೆ ಬೋಧಕೇತರ
ಬೈಂದೂರು:	2	6
ಶಂಕರನಾರಾಯಣ:	3	1

ಆ) ಆದಷ್ಟೂ ಜಾಗ್ರತೆ ಭರ್ತಿ ಮಾಡಲಾಗುವುದು.

ಇ) ಬೈಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇದ್ದು, ಸದರಿ ಕಟ್ಟಡವನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶಂಕರನಾರಾಯಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡವನ್ನು ನಿರ್ಮಿಸುವ ಸಲುವಾಗಿ ಅಗತ್ಯ ಜಮೀನನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ. ಜಮೀನನ್ನು ಪಡೆದ ನಂತರ ಕಟ್ಟಡವನ್ನು ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ.ಎಸ್. ಆಚಾರ್:– ಕುಂದಾಪುರ ತಾಲ್ಲೂಕಿನ ಬೈಂದೂರು ಮತ್ತು ಶಂಕರನಾರಾಯಣ ಎರಡೂ ಕಡೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕರ ಸ್ಥಾನ, ಬೋಧಕೇತರ ಸಿಬ್ಬಂದಿ ಸ್ಥಾನ ಬಹಳಷ್ಟು ಖಾಲಿ ಇವೆ. ಕಳೆದ ವರ್ಷ ಇದೇ ಪ್ರಶ್ನೆ ಹಾಕಿದ್ದೆ, ನಮ್ಮ ಮಿತ್ರರು ಹೇಳಿದ ಹಾಗೆ ಇದೇ ಉತ್ತರ ಬಂದಿದೆ. ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು ಈ ಉತ್ತರ ಬರಬಾರದು ಎಂದು ನಾನು ಅಪೇಕ್ಷೆ ಪಡುತ್ತೇನೆ. ಸರಕಾರದಿಂದ ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು ಎಂಬ ಉತ್ತರ ಇನ್ನು ಮೇಲೆ ಕೊಡಬೇಡಿ. ಇದನ್ನು ದಯವಿಟ್ಟು ಭರ್ತಿ ಮಾಡಿ. ಹಾಗೆಯೇ ಗ್ರಂಥಾಲಯ, ಪೀಠೋಪಕರಣ ಕೂಡ ಏನೂ ಇಲ್ಲ. ಕಟ್ಟಡದ ಬಗ್ಗೆ ಏನೋ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಿದ್ದೀರಿ. ಇದು ಆದಷ್ಟು ಬೇಗನೆ ಆಗಲಿ ಎಂದು ಹೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:– ಯಾವುದೇ ಪ್ರಶ್ನೆಗೆ ನಾನಂತೂ ನೀವು ಹೇಳಿದ ಹಾಗೆ ಎಂದೂ ಉತ್ತರ ಕೊಡಲಿಲ್ಲ. ಕಳೆದ ಒಂದು ತಿಂಗಳಲ್ಲಿ ಏನು ಘಾಡಿದ್ದೇವೆ ಇದೂ ಸಹ ನಾನು ಹೇಳಿದ್ದೇನೆ. ಟೀಚರ್ಸ್ ಬಗ್ಗೆ ನಾವು ಎರಡು ಮೂರು ತಿಂಗಳಲ್ಲಿ ಮಾಡುತ್ತೇವೆ ಕೊಡುತ್ತೇವೆ ಎಂದು ಸ್ಪಚ್ಛವಾಗಿ ಹೇಳಿದ್ದೇನೆ. ನಾನ್–ಟೀಚಿಂಗ್ ಸ್ಟಾಫ್ ಬಗ್ಗೆ ಈಗ ತಾನೆ ಹೇಳಿದ ಹಾಗೆ, ಡಿ – ಗ್ರೂಪ್‌ನಲ್ಲಿ ಸರಕಾರಿ ಕಾಲೇಜುಗಳಲ್ಲಿ 272 ವೇಕೆಂಟ್ ಪೋಸ್ಟ್ ಇದೆ, ಆಮೇಲೆ ಏಡೆಡ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ 935 ವೇಕೆಂಟ್ ಪೋಸ್ಟ್ಸ್ ಇದೆ. ಈಗ ತಾನೆ ಈ ವಿಚಾರದಲ್ಲಿ ನಾನು ಹೇಳಿದ ಹಾಗೆ, ನಾವು ಲೆಕ್ಚರ್ಸ್‌ಗೆ ಪ್ರಿಯಾರಿಟಿ ಕೊಟ್ಟು ಇದು ಆದ ಮೇಲೆ ಬೇರೆಯದಕ್ಕೆ ಕೊಡಬೇಕೆಂದು ಇದ್ದೇವೆ. ಖಂಡಿತವಾಗಿ ಇದನ್ನು ರಿಲ್ಯಾಕ್ಸೇಷನ್ ಮಾಡುವ ಎಲ್ಲಾ ಕಾರ್ಯಕ್ರಮ ನಾವು ತೆಗೆದುಕೊಳ್ಳುತ್ತೇವೆ.

ಚಿಕ್ಕನಾಯಕನ ಹಳ್ಳಿಯಲ್ಲಿರುವ ಪದವಿ ಮಹಾವಿದ್ಯಾಲಯ ಕುರಿತು.

102. ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕನಾಯಕನ ಹಳ್ಳಿಯಲ್ಲಿ ಸರ್ಕಾರಿ ಪದವಿ ಕಾಲೇಜು ಇರುವುದು ಹಾಗೂ ಇನ್ನೊಂದು ಖಾಸಗಿ ಪದವಿ ಕಾಲೇಜು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕಾಲೇಜುಗಳಿಗೆ ಒಂದೇ ತೆರನಾದ ಐಚ್ಛಿಕ ವಿಷಯಗಳನ್ನು ಆಳವಡಿಸಲು ಕಾರಣವೇನು ?

ಇ) ವಿಜ್ಞಾನ ವಿಷಯ ಕಲಿಯಲು ವಿದ್ಯಾರ್ಥಿಗಳು ಬೇರೆ ಊರಿಗೆ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರಿ ಕಾಲೇಜಿನಲ್ಲಿ ಐಚ್ಛಿಕವಾಗಿ ವಿಜ್ಞಾನ ವಿಷಯ ಬೋಧಿಸುವ ಏರ್ಪಾಡು ಮಾಡಲಾಗುವುದೇ ?